ಆ. - ಇಲ್ಲ -

ಇ. ಘೋಷಿತ/ಅಘೋಷಿತ ಕೊಳಚೆ ಪ್ರದೇಶಗಳ ಹೊರಗಡೆ ವಾಸಿಸುವ ಕುಟುಂಬಗಳಿಗೆ ಹಳದಿ ಪಡಿತರ ಚೀಟಿಗಳನ್ನು ಹಂಚಲು ಅರ್ಜಿಗಳನ್ನು ಕರೆಯುವ ಪ್ರಸ್ತಾವನೆ ಇರುವುದಿಲ್ಲ.

ಬೆಂಗಳೂರು ನಗರದ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆ ವಿತರಣೆ

1880(2157): ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿರುವ ನ್ಯಾಯ ಬೆಲೆ ಅಂಗಡಿಗಳ ಸಂಖ್ಯೆ ಎಷ್ಟು;

ಆ. ಈ ನ್ಯಾಯಬೇಲೆ ಅಂಗಡಿಗಳಲ್ಲಿ ಹಳದಿ ಕಾರ್ಡುದಾರರಿಗೆ ಸಕ್ಕರೆ ವಿತರಿಸಲಾಗುತ್ತಿದೆಯೇ;

ಇ. ಹಾಗಿದ್ದಲ್ಲಿ, ಸರಾಸರಿ ಪ್ರತಿ ತಿಂಗಳು ಹಳದಿ ಪಡಿತರ ಚೀಟಿದಾರರಿಗಾಗಿ ಎಷ್ಟು ಪ್ರಮಾಣದ ಸಕ್ಕರೆಯನ್ನು ಈ ಅಂಗಡಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ;

ಈ. ಈ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆಯನ್ನು ಯಾವ ದರದಲ್ಲಿ ಮಾರಾಟ ಮಾಡಲಾಗುತ್ತಿದೆ;

ಉ. ಹೊರಗಡೆ ಸಕ್ಕರೆ ಇದಕ್ಕಿಂತ ಕಡಿಮೆ ದರದಲ್ಲಿ ಲಭ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ. ಹಾಗಿದ್ದಲ್ಲಿ, ನ್ಯಾಯಬೆಲೆ ಅಂಗಡಿಗಳಲ್ಲಿ ಮಾರಾಟಮಾಡುವ ಸಕ್ಕರೆ ಬೆಲೆಯನ್ನು ಹೊರಗಡೆಯ ಬೆಲೆಗಿಂತ ಕಡಿಮೆ ದರದಲ್ಲಿ ಮಾರಲು ಸರ್ಕಾರದ ಕ್ರಮ ಕೈಗೊಳ್ಳುತ್ತದೆಯೇ;

ಋ. ನ್ಯಾಯಬೆಲೆ ಅಂಗಡಿಗಳು ಸಕ್ಕರೆಯನ್ನು ಬೇಡಿಕೆ ಇಲ್ಲದ ಕಾರಣ ತೆಗೆದುಕೊಳ್ಳದೇ ಇರುವುದರಿಂದ, ಇಂತಹ ನ್ಯಾಯಬೆಲೆ ಅಂಗಡಿಗಳ ಮೇಲೆ ಸರ್ಕಾರ ಕ್ರಮಕೈಗೊಳ್ಳುವುದನ್ನು ಕೈಬಿಡುತ್ತದೆಯೇ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. 1603

ಆ. ಹೌದು.

ಇ. ಹಳದಿ ಪಡಿತರ ಚೀಟಿಗಳನ್ನು ನಿಯೋಜಿಸಲಾಗಿರುವ 1200 ನ್ಯಾಯಬೆಲೆ ಅಂಗಡಿಗಳಿಗೆ ಸರಾಸರಿ ಎರಡು ಕ್ವಿಂಟಾಲ್‌ನಂತೆ ಸಕ್ಕರೆ ಹಂಚಿಕೆ ಮಾಡಲಾಗುತ್ತಿದೆ.

ಈ. ಕೆ.ಜಿ.ಗೆ. ರೂ. 13.50

ಉ. - ಹೌದು -

ಊ. - ಇಲ್ಲ -

ಋ. ಸಕ್ಕರೆಯ ಬೇಡಿಕೆ ಇಲ್ಲದೆ ಎತ್ತುವಳಿ ಮಾಡದಿದ್ದ ನ್ಯಾಯಬೇಲೆ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ.

ಬೆಂಗಳೂರು ನಗರದಲ್ಲಿ ವ್ಯವಸ್ಥಿತವಾಗಿ ಸೀಮೆ ಎಣ್ಣೆ ವಿತರಣೆ

1881(2158): ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಪಡಿತರ ಚೀಟಿಗಳ ಮೂಲಕ ಸೀಮೆಎಣ್ಣೆ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು?

ಆ. ಇವರಿಗಾಗಿ ಪ್ರತಿ ತಿಂಗಳು ಬಿಡುಗಡೆ ಮಾಡುವ ಸೀಮೆಎಣ್ಣೆಯ ಪ್ರಮಾಣ ಎಷ್ಟು?

ಇ. ಪ್ರತಿ ತಿಂಗಳು ಪ್ರತಿ ಕಾರ್ಡುದಾರರಿಗೆ ನೀಡುತ್ತಿರುವ ಸೀಮೆಎಣ್ಣೆಯ ಪ್ರಮಾಣವೆಷ್ಟು?

ಈ. ಈ ಸೀಮೆಎಣ್ಣೆ ವಿತರಿಸುವಾಗ ಅಳತೆಯಲ್ಲಿ ಮೋಸ ಹಾಗೂ ಕಲಬೆರಕೆ ಸೀಮೆಎಣ್ಣೆ ವಿತರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. ಬೆಂಗಳೂರು (ಅಪ) ಪ್ರದೇಶದಲ್ಲಿ 621024 ಫಲಾನುಭವಿಗಳು ಪಡಿತರ ಚೀಟಿಗಳ ಮೂಲಕ ಸೀಮೆಎಣ್ಣೆ ಪಡೆಯುತ್ತಿದ್ದಾರೆ.

ಆ. ಬೆಂಗಳೂರು ನಗರ ಅನೌಪಚಾರಿಕ ಪಡಿತರ ಪ್ರದೇಶಕ್ಕೆ ಡಿಸೆಂಬರ್ 2002ನೇ ಮಾಹೆಯಲ್ಲಿ 5584 ಕೆ.ಎಲ್. ಸೀಮೆಎಣ್ಣೆ ಬಿಡುಗಡೆ ಮಾಡಲಾಗಿದೆ.

ಇ. ವಿತರಣಾ ಪ್ರಮಾಣದ ವಿವರ:

1. ಒಂದು ಅನಿಲ ಸಿಲಿಂಡರ್ ಹೊಂದಿರುವ ಪಡಿತರ ಚೀಟಿಗಳಿಗೆ 2 ಲೀಟರ್
2. ಅನಿಲ ಹೊಂದಿರದ ಏಕ ವ್ಯಕ್ತಿ ಪಡಿತರ ಚೀಟಿಗಳಿಗೆ 5 ಲೀಟರ್
3. ಅನಿಲ ಹೊಂದಿರದ ಪಡಿತರ ಚೀಟಿಗಳಿಗೆ 10 ಲೀಟರ್‌ರಂತೆ ವಿತರಣೆ ಮಾಡಲಾಗುತ್ತಿದೆ.

ಈ. ಹೌದು, ಅಳತೆಯಲ್ಲಿ ಮೋಸ ಮಾಡಿರುವ ವರದಿಗಳು ಬಂದಿವೆ.

ಬೆಂಗಳೂರು ನಗರದಲ್ಲಿ ಇಂಧನ ಕಲಬೆರಕೆ ತಡೆಗಟ್ಟಲು ಕೈಗೊಂಡ ಕ್ರಮ

1882(2159): ಶ್ರೀ ಎ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಕಳೆದ ಆರು ತಿಂಗಳಿಂದ ಎಷ್ಟು ಇಂಧನ ಕಲಬೆರಕೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ;

ಆ. ಇವುಗಳ ಪೈಕಿ, ಎಷ್ಟು ಪೆಟ್ರೋಲ್ ಬಂಕ್‌ಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಇ. ಬೆಂಗಳೂರು ನಗರದಲ್ಲಿ ಹಲವಾರು ಪೆಟ್ರೋಲ್ ಬಂಕ್‌ಗಳಲ್ಲಿ ಕಲಬೆರಕೆ ಇಂಧನ ಒದಗಿಸುತ್ತಿರುವುದು ಸರ್ಕಾರಕ್ಕೆ ಸಾರ್ವಜನಿಕರಿಂದ ದೂರುಗಳು ಬಂದಿದೆಯೇ;

ಈ. ಇಂಧನ ಕಲಬೆರಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. ಯಾವುದೂ ಇರುವುದಿಲ್ಲ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಯಾವುದೂ ಇರುವುದಿಲ್ಲ.

ಈ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು, ತೈಲ ಕಂಪನಿ, ಪೊಲೀಸ್, ಸಾರಿಗೆ ಮತ್ತು ಕಾನೂನು ಮಾಪನಶಾಸ್ತ್ರ ಅಧಿಕಾರಿಗಳ ಸಹಯೋಗದೊಂದಿಗೆ ಪೆಟ್ರೋಲ್ ಬಂಕ್‌ಗಳ ಜಂಟಿ ತಪಾಸಣೆಯನ್ನು ಕಾಲಕಾಲಕ್ಕೆ ಕೈಗೊಳ್ಳುತ್ತಿದೆ. ಅಲ್ಲದೇ ಇಲಾಖೆಯು ಸಮನಾಂತರ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುವ ಸೀಮೆಎಣ್ಣೆ ಹಾಗೂ ಇತರೆ ಪೆಟ್ರೋಲಿಯಂ ಉತ್ಪನ್ನಗಳಾದ ನಾಫ್ತ, ರೆಫಿನೇಟ್ ಮುಂತಾದವುಗಳಲ್ಲಿ ವಹಿವಾಟು ನಡೆಸುತ್ತಿರುವ ಮಳಿಗೆಗಳಿಗೆ ಹಠಾತ್ ಭೇಟಿ ನೀಡಿ ತಪಾಸಣೆ ನಡೆಸುತ್ತಿದೆ.